# ಖರ್ಜೂರದ ಮರದಂತೆ

ಸಾದಿ ಹೇಳುವ ದೃಷ್ಟಾಂತವೊಂದರಲ್ಲಿ
ಒಂದೂ ಫಲ ಕೊಡದ ಸೈಪ್ರಸ್‌ಮರದ
ಉಲ್ಲೇಖವಿದೆ

ಮೊಗೆಮೊಗೆದು ಕೊಡುವ ಖರ್ಜೂರಕ್ಕಿಂತ
ಅದೆಷ್ಟು ಸ್ವತಂತ್ರವಾಗಿ ಎತ್ತರಕ್ಕೆ ದಿಟ್ಟನಂತೆ
ಇದೆ ಆ ಸೈಪ್ರಸ್, ಸದಾ ಹಸಿರಾಗಿ

ಹಣ್ಣು ಕೊಟ್ಟವು, ಹೂವು ಕೊಟ್ಟವು
ಉದುರುತ್ತವೆ, ಅರಳತ್ತವೆ

ಎಲ್ಲಕ್ಕೂ ತನ್ನದೇ ನಿಯತಿಯಿದೆ
ಮನುಷ್ಯ ಅದನ್ನು ಮೀರಬಲ್ಲ

ಆದ್ದರಿಂದ ಕೊಡುವುದಾದರೆ ಕೊಡು
ಖರ್ಜೂರದಂತೆ ಮೊಗೆಮೊಗೆದು

ಕೊಡಲೇನೂ ಇಲ್ಲದಿದ್ದರೆ
ಇದ್ದುಬಿಡು ಸೈಪ್ರಸ್‌ನಂತೆ

ತೊಡೆದುಬಿಡಬಾರದು ಅವಕಾಶಗಳನ್ನು
ತೊಡೆದುಬಿಡಬೇಕು ಕೊರಗನ್ನು
ಇದ್ದೂ ಕೊಡದ್ದರ ಪಶ್ಚಾತ್ತಾಪ
ಇರದ್ದರ ಕೊರಗನ್ನು

● ಆರ್. ವಿಜಯರಾಘವನ್

